**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ**

**ಮಿಸ್ ಸಂಖ್ಯೆ: 9 /2017**

**ಪಿ.ಡಬ್ಲ್ಯು.1**

ದಿನಾಂಕಃ 20-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ. ವಿ.ಎಸ್ ರವರಿಂದ

ದಿನಾಂಕಃ01.06.2006ರಲ್ಲಿ ನಾನು ಜಮೀನನ್ನು ಎ.ಜೆ.ಕಲಾವತಿರವರಿಂದ ಖರೀದಿ ಮಾಡಿರುತ್ತೇನೆ. ಎ.ಜೆ.ಕಲಾವತಿರವರಿಗೆ ಶ್ರೀನಿವಾಸ್‌ರವರಿಂದ ಬಂದಿರುತ್ತದೆ. ಶ್ರೀನಿವಾಸ್‌ರವರಿಗೆ ಅವರ ತಂದೆ ಅಕ್ಕುಲಪ್ಪರವರಿಂದ ಸರ್ವೆ ನಂಬರ್‌ನಲ್ಲಿ 29 ಗುಂಟೆ ಬಂದಿರುತ್ತದೆ. ಅಕ್ಕುಲಪ್ಪನವರಿಗೆ ಶ್ರೀನಿವಾಸ್, ನಾರಾಯಣಸ್ವಾಮಿ ಮತ್ತು ನಾಗರಾಜ್ ಎಂಬ ಮೂರು ಜನ ಮಕ್ಕಳಿರುತ್ತಾರೆ. ಅಕ್ಕುಲಪ್ಪರವರ ಕುಟುಂಬದರವರ ನಡುವ ವಿಭಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾರಾಯಣಸ್ವಾಮಿರವರಿಂದ ಎದುರುದಾರರು ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿಯ ಹಿಸ್ಸೆಗಳು ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಎದುರುದಾರರ ಸ್ವತ್ತು, ಪಶ್ಚಿಮಕ್ಕೆ ತಾತಹಳ್ಳಿ ರಸ್ತೆ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ನನ್ನದೇ ಸ್ವತ್ತು. ಎದುರುದಾರರ ಮನೆಯ ವಿಸ್ತೀರ್ಣ 40 X16 ಸದರಿ ಮನೆಯಲ್ಲಿ ಎದುರುದಾರರು ವಾಸವಾಗಿದ್ದಾರೆ ಎಂದರೆ ಸರಿ ಅಲ್ಲ. ಸದರಿ ಮನೆಯಲ್ಲಿ ಯಾರಿದ್ದಾರೆಂದು ನನಗೆ ಗೊತ್ತಿಲ್ಲ.

ನಾನು ಕೇಸು ಹಾಕುವ ಮೊದಲೇ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿ ಆಗಿತ್ತು ಎಂದರೆ ಸರಿ ಅಲ್ಲ. ಈ ಕೇಸು ಹಾಕುವ ಮೊದಲು ದಾವಾ ಸ್ವತ್ತಿನಲ್ಲಿ ಖಾಲಿ ಜಾಗ ಇತ್ತು. ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಲು ಎಷ್ಟು ತಿಂಗಳಾಗಿತ್ತು ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆಯುತ್ತಿದ್ದೆ ಹಾಗಾಗಿ ಗೊತ್ತಿಲ್ಲ. ನಾನು ಬಂದ ನಂತರ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ನಾನು ಯಾವ ದಿನಾಂಕದಿಂದಯಾವ ದಿನಾಂಕದ ವರೆಗೆ ಆಸ್ಪತ್ರೆಯಲ್ಲಿದ್ದೆ ಎಂದು ನನಗೆ ನೆನಪಿಲ್ಲ. ನಾನು ಚಿಕ್ಕಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದೆ. ನಾನು ಚಿಕಿತ್ಸೆ ಪಡೆದ ದಾಖಲೆ ಸಿಗುತ್ತದಾ ಎಂದರೆ ನನಗೆ ಗೊತ್ತಿಲ್ಲ. 2014ರಲ್ಲಿ ದೂರನ್ನು ನೀಡಿರುತ್ತೇನೆ.

ಎದುರುದಾರರು ದಿನಾಂಕ 06.11.2009ರಲ್ಲಿ ಸರ್ವೆ ನಂ.23/3 ರಲ್ಲಿ 2 ಗುಂಟೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ ಅಲ್ಲ ಅವರು ಪಡೆದಿರುವುದು ಸರ್ವೆ ನಂ.23/12ರಲ್ಲಿ 2 ಗುಂಟೆ. ದೂರು ನೀಡಿದ ನಂತರ ಪೋಲೀಸಿನವರು ಸ್ಥಳಕ್ಕೆ ಬಂದು ಕಟ್ಟಡ ನಿರ್ಮಾಣ ಕೆಲಸವನ್ನು ನಿಲ್ಲಿಸಿದ್ದು, ಆ ಸಮಯದಲ್ಲಿ ಪಾಯ ಹಾಕುತ್ತಿದ್ದರು. ಆ ನಂತರ ನ್ಯಾಯಾಲಯದಲ್ಲಿ ಈ ಕೇಸು ಹಾಕಿದೆ. ನಂತರ ನ್ಯಾಯಾಲಯದಲ್ಲಿ ಯತಾಸ್ಥಿತಿಯಲ್ಲಿ ಕಾಪಾಡಿಕೊಳ್ಳುವಂತೆ ಆದೇಶ ಆಯಿತು. ಆದೇಶ ಆಗುವ ಸಮಯದಲ್ಲಿ ಪಾಯ ಹಾಕುತ್ತಿದ್ದರು. ದಾವಾ ಸ್ವತ್ತಿನಲ್ಲಿ ನಾನು ಬೇಲಿಯನ್ನು ಹಾಕಿದ್ದೆ ಆದರೆ ಅದನ್ನು ಕಿತ್ತು ಹಾಕಿದ್ದಾರೆ. ಬೇಲಿ ಕಿತ್ತು ಹಾಕಿದ ವಿಷಯದ ಬಗ್ಗೆಯೂ ದೂರು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ದಿನಾಂಕಃ06.01.2009ರಿಂದ ಎದುರುದಾರರೇ ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿ ಸರ್ವೆ ಮಾಡಬೇಕಾದ ಖಾಲಿ ಜಾಗ ಇತ್ತು. ಈ ಕೇಸು ಹಾಕಿದ ನಂತರ 2015 ರಲ್ಲಿ ಸರ್ವೆ ಮಾಡಿಸಿರುತ್ತೇನೆ. ಸರ್ವೆ ಮಾಡುವ ಮೊದಲು ಎದುರುದಾರರಿಗೂ ನೋಟೀಸ್ ನೀಡಿ ನಂತರ ಮಾಡಲಾಗಿರುತ್ತದೆ. ಸರ್ವೆ ನಂ.23/9 ಮತ್ತು 23/12 ಎರಡನ್ನೂ ಸರ್ವೆ ಮಾಡಿ ಗುರುತಿಸಿರುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ.23/12 ಬರುತ್ತದೆ. ಎದುರುದಾರರು ದಾವಾ ಸ್ವತ್ತಿನಲ್ಲಿ 1 ಮುಕ್ಕಾಲು ಗುಂಟೆ ಒತ್ತುವರಿ ಮಾಡಿರುವುದಾಗಿ ತಿಳಿಸಿದ್ದಾರೆ. ಸರ್ವೆ ಕಾಲಕ್ಕೆ ಸರ್ವೆ ನಂ.23/12 ಖಾಲಿ ಜಾಗ ಇತ್ತು. ಈಗಲೂ ಅದರಲ್ಲಿ ಖಾಲಿ ಜಾಗ ಇದೆ.

ಎದುರುದಾರು ನ್ಯಾಯೂಲಯದ ಆದೇಶ ಉಲ್ಲಂಘಿಸಿ ಒತ್ತುವರಿ ಮಾಡಿ ಮನೆ ಕಟ್ಟಿಲ್ಲ ಎಂದರೆ ಸರಿ ಅಲ್ಲ. ದಾವೆ ಹಾಕುವ ಮೊದಲೇ ಮನೆಯನ್ನು ಕಟ್ಟಿದ್ದರು ಎಂದರೆ ಸರಿ ಅಲ್ಲ. ಎದುರುದಾರರು ರೇಷ್ಮೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ದಾಹಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಇದುವರೆಗೂ ಸರ್ವೆ ಆಗಿಲ್ಲ ಎಂದರೆ ಸರಿ ಅಲ್ಲ. ನಾನು ಸರ್ವೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಕ್ಷೆಯನ್ನು ಸೃಷ್ಟಿಸಿದ್ದೇನೆಂದರೆ ಸರಿ ಅಲ್ಲ. ಅರ್ಜಿಯಲ್ಲಿ ಸಕಾರಣ ಇಲ್ಲದಿರುವುದರಿಂದ ವಜಾ ಮಾಡಬೇಕು ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.